ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜವಳಿ ಇಲಾಖೆಯು ಯಾವ ವರ್ಷದಿಂದ ಪ್ರಾರಂಭವಾಯಿತು?

ಆ) ಸದರಿ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅನುಷ್ಠಾನಗೊಳಿಸಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎಂ.ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ದಿನಾಂಕ: 1.4.1992 ರಿಂದ ಪ್ರಾರಂಭವಾಗಿರುತ್ತದೆ.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವ ಬಗ್ಗೆ.

2000(2637)

ಶ್ರೀ ಕೆ.ಎನ್.ಸುಬ್ಬಾರೆಡ್ಡಿ(ಬಸವನಗುಡಿ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಹೆಚ್ಚಾಗಿದ್ದು ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಇಂತಹ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ;

ಇ) ಈ ಪ್ರಕರಣಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ತಡೆಗಟ್ಟಲು ಕೆಳಕಂಡ ಕ್ರಮಗಳನ್ನು ಸರ್ಕಾರವು ಕೈಗೊಂಡಿದೆ:

1) ಖನಿಜಗಳು ಲಭ್ಯವಿರುವ ಪ್ರಮುಖ ಸ್ಥಳಗಳಲ್ಲಿ ಇಲಾಖೆಯ ಕಛೇರಿಯನ್ನು

ತೆರೆಯಲಾಗಿದೆ;

2) ಆಯಕಟ್ಟಿನ ಸ್ಥಳಗಳಲ್ಲಿ 19 ತನಿಖಾ ಠಾಣೆಗಳನ್ನು ಸ್ಥಾಪಿಸಿದೆ;

3) ಗಣಿ ಮತ್ತು ಭೂವಿಜ್ಞಾನ ನಿರ್ದೇಶನಾಲಯದಲ್ಲಿ ಸಂಚಾರಿ ತನಿಖಾದಳವನ್ನು ರಚಿಸಿದೆ;

4) ಅಕ್ರಮ ಗಣಿಗಾರಿಕೆ : ಸಾಗಾಣಿಕೆಯಲ್ಲಿ ನಿರತರಾದವರ ವಿರುದ್ಧ ಪೋಲೀಸ್ ಠಾಣೆಗಳಲ್ಲಿ ದೂರು ದಾಖಲಿಸಿ ಮೊಕದ್ದಮೆ ಜರುಗಿಸಲಾಗುತ್ತಿದೆ.

ಆ) ಒಟ್ಟು 443 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

ಇ) ಈ ಪ್ರಕರಣಗಳಲ್ಲಿ ಪೋಲೀಸ್ ಠಾಣೆಗಳಲ್ಲಿ ದೂರು ದಾಖಲಿಸಿ ಮೊಕದ್ದಮೆ ಜರುಗಿಸುತ್ತಿರುವುದೇ ಅಲ್ಲದೇ ನಿಯಮಾನುಸಾರ ದರದ ರೂಪದಲ್ಲಿ ಹಣ ವಸೂಲಿ ಮಾಡಲಾಗಿದೆ.

ಬೆಂಗಳೂರು ನಗರದಲ್ಲಿ ಭಿಕ್ಷುಕರಿಂದಾಗಿರುವ ಸಮಸ್ಯೆಗಳು.

2001(2639)

ಶ್ರೀ ಸುಬ್ಬಾರೆಡ್ಡಿ ಕೆ.ಎನ್.(ಬಸವನಗುಡಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಸಿಗ್ನಲ್ ವೃತ್ತಗಳ ಬಳಿಯ ಭಿಕ್ಷುಕರನ್ನು ಇತ್ತೀಚೆಗೆ ಭಿಕ್ಷುಕರ ವಸತಿ ಕೇಂದ್ರಕ್ಕೆ ಇಲಾಖೆಯವರು ಹಸ್ತಾಂತರಿಸಿದ್ದು ಆದರೆ ಪುನಃ ಸಿಗ್ನಲ್ ವೃತ್ತಗಳ ಬಳಿ ಭಿಕ್ಷುಕರ ಹಾವಳಿ ಹೆಚ್ಚಾಗಿರುವುದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಭಿಕ್ಷುಕರ ವಸತಿ ಕೇಂದ್ರಕ್ಕೆ ನಿರ್ವಹಣೆಯನ್ನು ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಬೆಂಗಳೂರು ನಗರದ ಸಿಗ್ನಲ್ ವೃತ್ತಗಳ ಬಳಿಯ ಭಿಕ್ಷುಕರನ್ನು ಇಲಾಖೆಯ ವಾಹನದಿಂದ ಭಿಕ್ಷುಕರನ್ನು ಬಂಧಿಸಿ ನಿರಾಶ್ರಿತರ ಕೇಂದ್ರಕ್ಕೆ ತರಲಾಗುತ್ತದೆ. ಇದಲ್ಲದೆ